ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ

ಓ.ಎಸ್ ನಂಬರ 35/2019

ಪಿ ಡಬ್ಲ್ಯೂ- 2

ದಿಃ 22-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ರಮೇಶ್ ಮೆಣಸು ನಾಯ್ಕ |
| ತಂದೆಯ ಹೆಸರುಃ | ಮೆಣಸು ನಾಯ್ಕ |
| ವಯಸ್ಸುಃ | 56 ವರ್ಷ |
| ಉದ್ಯೋಗಃ | ಟೆಲಂಗ್ ಕೆಲಸ |
| ವಿಳಾಸಃ | ಕಂಬರಕೇರಿ, ಅಂಕೋಲಾ |

ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಎಂ.ಪಿ.ಬಿ ಯವರಿಂದಃ

ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ವಾದಿಯವರುನ್ನು ಗುರುತಿಸುತ್ತೇನೆ. ಅದೇ ರೀತಿ 1 ನೇ ಪ್ರತಿವಾದಿಯವರನ್ನು ಸಹ ಗುರುತುಪಡಿಸಿದ್ದು ನಮ್ಮ ಊರಿನವರೆಯಾಗಿರುತ್ತಾರೆ. ನಮ್ಮ ಮನೆಯು ವಾದಿ ಮತ್ತು ಪ್ರತಿವಾದಿಯವರಿಂದ ಸುಮಾರು 20 ರಿಂದ 25 ಅಡಿ ದೂರದಲ್ಲಿರುತ್ತದೆ, ವಾದಿ ಮತ್ತು ಪ್ರತಿವಾದಿಯರ ಮನೆಯ ಮಧ್ಯದಲ್ಲಿ ಬಾವಿ ಇರುತ್ತದೆ. ಅದು ಅನಾದಿ ಕಾಲದಿಂದ ಇರುತ್ತದೆ. ನಾವು ಬಂದು ಸುಮಾರು 28 ವರ್ಷಗಳಾಗಿರುತ್ತವೆ. ವಾದಿ ಮತ್ತು ಪ್ರತಿವಾದಿಯರ ಮನೆಯ ಉತ್ತರ ದಿಕ್ಕಿನ ಕಡೆ ಇರುತ್ತದೆ. ಬಾವಿಯು ವಾದಿಯ ಮನೆಯ ಬಲಕ್ಕೆಹಾಗೂ ಪ್ರತಿವಾದಿ ಮನೆಯ ಎಡಕ್ಕೆ ಇರುತ್ತದೆ. ಬಾವಿಯಲ್ಲಿ ನೀರು ಇರುತ್ತದೆ. ಸದರಿ ಬಾವಿಯ ನೀರನ್ನು ನಾನು ಜಾಗ ಖರೀದಿ ಮಾಡಿದ ಮೇಲೆ ಉಪಯೋಗಿಸುತ್ತಿದ್ದೇನು. ಬಾವಿಯ ನೀರನ್ನು ವಾದಿ ಮತ್ತು ಪ್ರತಿವಾದಿಯರು ಉಪಯೋಸುತ್ತಿದ್ದಾರೆ. ಹಗ್ಗ ಹಾಗೂ ಪಂಪಿನ ಮುಖಾಂತರ ನೀರನ್ನು ತೆಗೆದುಕೊಳ್ಳುತ್ತಾರೆ. ವಾದಿ ಪ್ರತಿವಾದಿಯರು ಸದರಿ ನೀರನ್ನು ಉಪಯೋಗಿಸುತ್ತಿದ್ದನು ನಾನು ಬಂದಾಗಿನಿಂದ ನೋಡುತ್ತಿದ್ದೆನೆ. ಸದರಿ ಬಾವಿಯ ನೀರನ್ನು ಗೀಡಕ್ಕೆ ಹಾಕಲು ಹಾಗೂ ಮನೆ ಬಳಕೆಗೆ ಉಪಯೋಗಿಸುತ್ತಾರೆ. ಇಂದಿಗೂ ಸಹ ಉಪಯೋಗ ಮಾಡುತ್ತಿದ್ದಾರೆ.

(ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದುಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ ಎಂ ಎಫ ಸಿ, ಅಂಕೋಲಾ.